Rajajinagar Education Society's

# SRI AUROBINDO COLLEGE

Affiliated to Bangalore University & NAAC Accredited B+

#6/c, 5th Main, Dr M.C.Modi Road, Mahalakshmipuram, Bengaluru-86

www.sriaurobindocollege.ac.in Ph: 080-23492449

## A ONE DAY NATIONAL SEMINAR

on

# "PORTRAYAL OF INDIAN CULTURE IN LITERATURE"

## 15 July 2022

organised by

## Departments of Languages

in Association with

## Internal Quality Assurance Cell

Copy Right - 2022

ISBN No - 978-93-85291-13-5

Publishers Address

EnkayBooks & Infotech
#209, Harisadan, 20 Ansari Road, New
Delhi - 110002

# (ಕನ್ನಡ ಮತ್ತು ಹಿಂದಿ ವಿಭಾಗ)


| ಕ್ರಮ ಸಂಖ್ಯೆ | ಪ್ರಬಂಧದ ಶೀರ್ಷಿಕೆ | ಲೇಖಕರ ಹೆಸರು |
|---|---|---|
| 1 | ಸಾಹಿತ್ಯದಲ್ಲಿ ಭಾರತೀಯ ಸಂಸ್ಕೃತಿಯ ಚಿತ್ರಣ | – ಎಚ್.ಎಸ್. ವೆಂಕಟೇಶಮೂರ್ತಿ |
| 2 | ಪಂಪನ ಆದಿಪುರಾಣದಲ್ಲಿ ಪ್ರಕೃತಿ ವರ್ಣನೆ. | – ಡಾ.ಕೃಷ್ಣೋಜಿರಾವ್.ಜಿ |
| 3 | ಕುಮಾರವ್ಯಾಸ ಭಾರತದ ಸ್ತ್ರೀ ಪಾತ್ರಗಳು | – ಗೀತಾ.ಡಿ |
| 4 | ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಗರ ಸಂಸ್ಕೃತಿ | – ಗೀತಾ.ಎಸ್ |
| 5 | ದಕ್ಷಿಣ ಭಾರತದ ಸ್ವತಂತ್ರ ಪೂರ್ವ ಮಹಿಳಾ ಕಥಾ ಸಾಹಿತ್ಯ | – ಡಾ.ಕೃಪ.ಎ |
| 6 | ಕನ್ನಡ ಸಾಹಿತ್ಯ ಮತ್ತು ಪ್ರಕೃತಿ | – ಲಕ್ಷ್ಮೀದೇವಿ.ಎನ್ |
| 7 | ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತಿ | – ಲಕ್ಷ್ಮಣ್ .ಎಂ |
| 8 | ಪುರಂದರದಾಸರ ಕೀರ್ತನ ಸಾಹಿತ್ಯ ಮತ್ತು ಸಂಸ್ಕೃತಿ | – ಡಾ.ಬಿ.ಕೆ.ಮಂಜುಳಾ |
| 9 | ಚದುರಂಗದ ತುಳಸಿ : ಅಸ್ತಿತ್ವದ ಹುಡುಕಾಟ | – ಮಂಜುಳಾ.ಎಲ್ |
| 10 | ಕೆ.ಎಸ್.ಎನ್.ಅವರ ಹಳ್ಳಿಯ ಚೆಲುವೆಗೆ ಮತ್ತು ಪ್ರಶ್ನೆಗೆ ಉತ್ತರ | – ಡಾ.ಪಿ.ನಟರಾಜ |
| 11 | ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಚಿತ್ರಣ | – ರಾಧಾ ಆರ್ ನಾಡಿಗ |
| 12 | ಕಿರಗೂರಿನ ಗಯ್ಯಾಳಿಗಳು : ಒಂದು ಅವಲೋಕನ | – ಶ್ರೀರಂಜನಿ.ಕೆ.ಜೆ |
| 13 | ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಚಿತ್ರಣ | – ರವಿಶಂಕರ್.ಜೆ |
| 14 | ನವೋದಯ ಕಾಲಮಾನದಲ್ಲಿ ಮಹಿಳಾ ಸಾಹಿತ್ಯ | – ಡಾ. ರಂಗಲಕ್ಷ್ಮೀ ಪಿ.ಎ. |
| 15 | ಕನ್ನಡ ಸಾಹಿತ್ಯದಲ್ಲಿ ದೇವರು | – ಡಾ.ಸವಿತಾ ರವಿಶಂಕರ್ |
| 16 | ಕನ್ನಡ ಸಾಹಿತ್ಯ ಮತ್ತು ಸೌಂದರ್ಯ | – ಡಾ.ಸುಭಾಷ್ ಭೋೀಗೇರ |
| 17 | ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಚಿತ್ರಣ | – ಡಾ.ಸುಬ್ರಹ್ಮಣ್ಯ ಭಟ್ಟ |
| 18 | ಅನುವಾದಿತ ಸಂಸ್ಕೃತ ನಾಟಕ : ಮಹಿಳಾ ನೋಟ ಕ್ರಮ | – ಡಾ.ಸುಷ್ಮಾ.ಎಂ |
| 19 | ಸಾಹಿತ್ಯದಲ್ಲಿ ಸ್ತ್ರೀಯರ ಪಾತ್ರ | – ಶೃತಿ ಕೆ.ಎಸ್ |
| 20 | ಪರಿಸರ ಪ್ರಜ್ಞೆ ಮೂಡಿಸುವ ನಾಗೇಶ ಹೆಗಡೆಯವರ ಅಂಕಣ ಬರಹಗಳು | – ಡಾ. ಡಿ.ಸಿ. ಶಿವಕುಮಾರ್ |
| 21 | ನಾಗಚಂದ್ರನ ರಾಮಚಂದ್ರಚರಿತ ಪುರಾಣದಲ್ಲಿ ಪ್ರೇಮ ದಾಂಪತ್ಯ ಮತ್ತು ವಿರಹ ಪರಿಕಲ್ಪನೆಗಳು | – ವೀಣಾ.ಎನ್.ಹೆಚ್ |
| 22 | ಬೇಂದ್ರೆ ಕಾವ್ಯಗಳಲ್ಲಿ ನಿಸರ್ಗ ಮತ್ತು ಜೀವನದ ಮೌಲ್ಯಗಳು | – ವೆಂಕಟೇಶ್.ಟಿ.ಎಸ್ |
| 23 | ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತಿ ಮತ್ತು ಕುವೆಂಪು | – ಝುರೀನಾ.ಕೆ |
| 24 | मैथिलीशरण गुप्त केखंडकाव्य पंचवटी में प्रतिबिंबित भारतीय संस्कृति | - लक्षमी. वि.पि |
| 25 | डॉ. हजारी प्रसाद द्विवेदी जी केनिबंधों में सामाजिक समस्याओं का चित्रण | - डॉ. आर. उमा शर्मा |
| 26 | हिंदी साहित्य में भारतीय संस्कृति केसामाजिक समस्याओं का चित्रण | - विनीता कुमारी |
| 27 | हिंदी साहित्य में भारतीय संस्कृति केसामाजिक समस्याओं का चित्रण | - डॉ. वी.तारा नायर |
| 28 | शिवानी की कहानियों में भारतीय संस्कृति केसामाजिक समस्याओं का चित्रण | - डॉ. राखी.केशाह |
| 29 | हिंदी साहित्य में भारतीय संस्कृति केसामाजिक समस्याँओं का चित्रण | - रजनी शाह |
| 30 | नमिता सिंह के कथा साहित्य में संस्कृति | - डॉ. गगन कुमारी |
| 31 | हिंदी साहित्य में भारतीय संस्कृति के सामाजिक समस्याँए | - डॉ. उषा |

# ಪುರಂದರದಾಸರ ಕೀರ್ತನ ಸಾಹಿತ್ಯ ಮತ್ತು ಸಂಸ್ಕೃತಿ

ಡಾ. ಬಿ.ಕೆ. ಮಂಜುಳ
ಪ್ರಾಧ್ಯಾಪಕರು ಮತ್ತು ಕನ್ನಡ ವಿಭಾಗದ ಮುಖ್ಯಸ್ಥರು
ಶ್ರೀಭಗವಾನ್ ಮಹಾವೀರ್ ಜೈನ್ ಪ್ರಥಮ ದರ್ಜೆ ಕಾಲೇಜು
ರಾಬರ್ಟ್‌ಸನ್ ಪೇಟೆ, ಗೀತಾ ರಸ್ತೆ, ಕೆ.ಜಿ.ಎಫ್ – 563122
ಮೊಬೈಲ್ ಸಂಖ್ಯೆ: 9449313804
email: manjulaprasad.bk@gmail.com

ಮನುಷ್ಯ ಸಂಘ ಜೀವಿ. ತಾನು ಬದುಕುವ ಸಮುದಾಯದ ಒಂದು ಅಂಗವಾಗಿದ್ದಾನೆ. ವ್ಯಷ್ಟಿಯಿಂದ ಸಮಷ್ಟಿ ರೂಪುಗೊಳ್ಳುತ್ತದೆ. ಪುರಂದರದಾಸರು ಅನುಭಾವಿಗಳಾಗಿದ್ದರೂ ಜನಜೀವನದ ಬಗ್ಗೆ ಕಳಕಳ ಇದ್ದು ಜಾತಿ, ಧರ್ಮ, ಮದುವೆ, ವೃತ್ತಿ, ಅಂತಸ್ತು, ಹುಟ್ಟು, ಸಾವು, ಸೂತಕ, ಅಧಿಕಾರ ಮುಂತಾದ ಅಂಶಗಳನ್ನು ತಿದ್ದುವ ಕೆಲಸವನ್ನು ಮಾಡಿದ್ದಾರೆ. ಇವುಗಳ ಬಗ್ಗೆ ಪ್ರತಿಯೊಂದು ಸಂಸ್ಕೃತಿ ತನ್ನದೇ ಆದ ನಂಬಿಕೆ ಮತ್ತು ಪರಂಪರೆಗಳನ್ನು ಸೃಷ್ಟಿಸಿಕೊಂಡಿರುತ್ತದೆ. ಮೂಲಭೂತವಾದಿಗಳು ಈ ಸಮಾಜದಲ್ಲಿ ಸೃಷ್ಟಿಸಿದ ಗೊಂದಲದ ಬದುಕನ್ನು ಅಸಹನೀಯಗೊಳಿಸಿದೆ.

ಕೀರ್ತನ ಸಾಹಿತ್ಯದಲ್ಲಿ ಪ್ರಮುಖರೆಂದರೆ ಪುರಂದರ ದಾಸರು. ವಚನ ಸಾಹಿತ್ಯದಲ್ಲಿ ಬಸವಣ್ಣನವರಿದ್ದಂತೆ ದಾಸಸಾಹಿತ್ಯದಲ್ಲಿ ಪುರಂದರದಾಸರದು ಮೇರು ವ್ಯಕ್ತಿತ್ವ. ತಮ್ಮ ಕೀರ್ತನೆಗಳ ಮೂಲಕ ಸಾರಿದ ಜೀವನ ಮೌಲ್ಯಗಳು ಎಲ್ಲ ಕಾಲಕ್ಕೂ ಅನ್ವಯಿಸುವಂತಹವು, ಅನುಕರಣಿಯವಾದವು. ಇಲ್ಲಿ ಪ್ರಮುಖವಾಗಿ ಕಾಣುವ ಅಂಶಗಳೆಂದರೆ ದೇವರು ಮತ್ತು ಬದುಕು. ವಿಭಿನ್ನ ಜನಸಮುದಾಯಗಳ ನಡುವಿನ ಬದುಕನ್ನು ಕಂಡವರು ಅನುಭವಿಸಿದವರು. ತಾವು ಕಂಡ, ಕೇಳಿದ, ಅನುಭವಕ್ಕೆ ಬಂದ ಲೋಪಗಳನ್ನು ತಿದ್ದುವ ಕೆಲಸವನ್ನು ಮಾಡಿದರು. ತಮ್ಮ ಕೃತಿಗಳಲ್ಲಿ ಟೀಕಿಸುತ್ತಾ, ವಿಡಂಬಿಸುತ್ತಾ, ವಿಷಾದವನ್ನು ವ್ಯಕ್ತಪಡಿಸುತ್ತಾ ಜನರ ಬದುಕನ್ನು ಸುಧಾರಿಸುವ ದಿಕ್ಕಿನಲ್ಲಿ ಪ್ರಯತ್ನಿಸಿದವರು.

ಮಾನವನ ಬದುಕನ್ನು ಮೌಲ್ಯೀಕರಿಸುವ ಆಯಾಮ ದಾಸ ಸಾಹಿತ್ಯಕ್ಕಿದೆ. ಈ ಕಾರಣಕ್ಕಾಗಿ ಪುರಂದರದಾಸರ ಕೀರ್ತನೆಗಳ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಬೌದ್ಧಿಕ ಮತ್ತು ಚಾರಿತ್ರಿಕತೆಯ ವಿಭಿನ್ನ ನೆಲೆಗಳಲ್ಲಿ ಇಂದು ಗ್ರಹಿಸಿಕೊಳ್ಳಬೇಕಾಗಿದೆ. ಇದರಿಂದ ಪ್ರಸ್ತುತ ಸಂದರ್ಭದ ಸವಾಲುಗಳನ್ನು ಎದುರಿಸುವ, ದಾಟುವಿಕೆಗೆ ಅಗತ್ಯವಾದ ವಿಚಾರಗಳು ಅಂತಸ್ತವಾಗಿವೆ. ಹೀಗೆ ಇರುವ ಸಾರ್ವಕಾಲಿಕವಾದ ಅಂಶಗಳನ್ನು ಶೋಧಿಸುವ, ದುಡಿಸಿಕೊಳ್ಳುವ, ಅಳವಡಿಸಿಕೊಳ್ಳುವ ಅಗತ್ಯತೆ ಆಯಾಯ ಕಾಲಘಟ್ಟದ ಜೀವನಕ್ಕೆ ಇರುತ್ತದೆ.

ಭಾರತೀಯ ಸಮಾಜದ ಬಹುದೊಡ್ಡ ಕಳಂಕವಾಗಿ ಇಂದು ಸಹ ಕಾಡುತ್ತಿರುವ ದೊಡ್ಡ ಪೆಡಂಭೂತವೆಂದರೆ ಜಾತಿ, ಕುಲಗಳ ಸಮಸ್ಯೆ. ಅಸ್ಪೃಶ್ಯತೆ, ಹೊಲೆತನ. ಅದಕ್ಕೆ ಹೀಗೆ ಕೀರ್ತನೆಗಳಲ್ಲಿ ತಮ್ಮ ನಿಲುವನ್ನು ಅಭಿವ್ಯಕ್ತಿಸಿದ್ದಾರೆ. ಹರಿಭಕ್ತಿ ಪ್ರಧಾನವಾಗಿದ್ದರೂ ಸಹ ಪುರಂದರದಾಸರು 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲು ಬೇಡಿ ಹುಚ್ಚಪ್ಪಗಳಿರಾ' ಎಂದು ಹೇಳಿದವರು. ಸಾಂಸಾರಿಕ ಬದುಕನ್ನು ನಡೆಸಿ, ನೆರೆಹೊರೆಯವರೊಂದಿಗೆ ಹೊಂದಿಕೊಂಡು ಬದುಕಬೇಕೆಂದು 'ಈಸಬೇಕು ಇದ್ದು ಜಯಿಸಬೇಕು' ಬದುಕಿ ತೋರಿಸಿದವರು ಪುರಂದರದಾಸರು.

'ಆವ ಕುಲವಾದರೇನು ಆವನಾದರೇನು ಆತ್ಮ ಭಾವವರಿತಮೇಲೆ' ಎಂಬ ಕೀರ್ತನೆಯಲ್ಲಿ ಭಾವವನ್ನು ಅರಿಯುವ ಜ್ಞಾನ ಮುಖ್ಯವೇ ಹೊರತು ಬಣ್ಣ, ಮತ, ಕುಲಗಳು ಮುಖ್ಯವಲ್ಲವೆಂದು ಹೇಳುತ್ತಾರೆ. ಅದೇ ರೀತಿ 'ಹೊಲೆಯ ಹೊಲತಿ ಇವರವರಲ್ಲ ಹೊಲಗೇರಿಯೊಳು ಹೊಲೆಯ ಹೊಲತಿಯಿಲ್ಲ' ಮತ್ತು 'ಹೊಲೆಯ ಹೊರಗಿಹನೆ ಊರೊಳಗಿಲ್ಲವೆ ಹರಿಯ ಭಕ್ತರು ಪೇಳ ಮತ್ತಿದನು' ಎಂಬ ಕೀರ್ತನೆಗಳಲ್ಲಿ ಹೊಲೆಯ ಎಂದರೆ ಯಾರು ಎಂಬುದನ್ನು ಕುರಿತ ದೃಷ್ಟಾಂತಗಳಲ್ಲಿ ತನ್ನ ಜವಾಬ್ದಾರಿಯನ್ನು ನೆರವೇರಿಸದವರು ಹೊಲೆಯರು ಎಂದಿದ್ದಾರೆ. ಕುಲವಾಗಲಿ ವಿದ್ಯೆಯಾಗಲಿ ಯಾವೊಬ್ಬನ ಹಿರಿಮೆಯನ್ನು ಹೇಳದು. ಶೀಲಸಂಪತ್ತೇ ಗೌರವಕ್ಕೆ ಕಾರಣ. ಹೊಲೆಯರೆಂದು ಒಂದು ಪಂಗಡವನ್ನು ದೂರವಿರಿಸಿ ಕೀಳುನೋಟದಿಂದ ಕಾಣುತ್ತಿದ್ದ ಆ ಕಾಲದಲ್ಲಿ ದಾಸರು ಹೊಲೆಯರೆಂಬ ಜಾತಿ ಸೂಚಕವಾದ ನಿಕೃಷ್ಟ ಶಬ್ಧವಲ್ಲ. ಅದು ಭ್ರಷ್ಟಾಚಾರವನ್ನು ಹೇಳುವ ಪದವೆಂದು ಪರಂಪರಾಗತ ನಂಬಿಕೆಗೆ ದಿಟ್ಟತನದಿಂದ ಉತ್ತರವನ್ನು ಕೊಟ್ಟವರು.

ಹೊಲೆತನವೆಂಬುದು ಹುಟ್ಟಿನಲ್ಲಿಲ್ಲ. ಅದು ನಡತೆ, ಆಚಾರ, ಶೀಲ, ಗುಣಗಳಲ್ಲಿದೆ ಎಂದು ಜಾತಿ ಭ್ರಮೆಯಲ್ಲಿ ಮುಳುಗಿರುವವರಿಗೆ ಲೇವಡಿ ಮಾಡಿದ್ದಾರೆ. ಜೊತೆಗೆ ಸಮಾಜದಲ್ಲಿ ಮತ್ತು ಸಂಸಾರಿಯಾಗಿ ಬದುಕಿ ಮೋಕ್ಷವನ್ನು ಪಡೆಯಬೇಕಾದ ದಾರಿ ಮತ್ತು ಲಕ್ಷಣಗಳನ್ನು ತಿಳಿಸಿದ್ದಾರೆ.

ಮಾನವ ಪ್ರೀತಿ, ವಿಶ್ವಾಸ, ಕರುಣೆ ಗುಣಗಳೊಂದಿಗೆ ಮಾನವೀಯತೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಸಮಾಜದಲ್ಲಿನ ಮನುಷ್ಯ ಸಂಬಂಧಗಳ ಹದ, ಹಿತ ತಪ್ಪಲು ಮುಖ್ಯವಾಗಿ ಹಣ ಕಾರಣವಾಗುತ್ತದೆ. ಇಂದು ಬಹುತೇಕ ಮೋಸ, ವಂಚನೆಗಳಿಗೆ ಹಣಬಲವೇ ಕಾರಣವಾಗಿದೆ. ಇದನ್ನು ಹದಿನೈದನೆಯ ಶತಮಾನದಲ್ಲಿಯೇ ಅರಿತಿದ್ದ ಪುರಂದರದಾಸರು ಹಣವನ್ನು ಕುರಿತು ಹೀಗೆ ಹೇಳಿದ್ದಾರೆ. 'ರೊಕ್ಕ ಎರಡಕ್ಕು ದುಃಖ ಕಾಣಕ್ಕ' ಎಂಬ ಕೀರ್ತನೆಯಲ್ಲಿ ಹಣ ಮಾಡಬಾರದನ್ನೆಲ್ಲಾ ಮಾಡಿಸುತ್ತದೆ. ಇರಬೇಕಾದ ಸಂಬಂಧಗಳನ್ನು ಹಾಳು ಮಾಡುತ್ತದೆ. ಮನುಷ್ಯ ತನ್ನ ನೀತಿ, ಮೌಲ್ಯಗಳನ್ನು ಬಿಟ್ಟು ಹಣಕ್ಕೆ ದಾಸನಾಗುವ, ಹಣವೇ ಮನುಷ್ಯನನ್ನು ಕುಣಿಸುವ ಪರಿಯನ್ನು ತಿಳಿಸಿದ್ದಾರೆ.

ಹಾಗೆಯೇ 'ದುಗ್ಗಾಣಿ ಎಂಬುದು ದುರ್ಜನ ಸಂಗ ದುಗ್ಗಾಣಿ ಬಲು ಕೆಟ್ಟದಣ್ಣ' ಕೀರ್ತನೆಯಲ್ಲಿ ಮನುಷ್ಯ ಎಲ್ಲವನ್ನು ಮಾಡುವುದು ಹಣಕ್ಕಾಗಿಯೇ. ದುಗ್ಗಾಣಿಯ ಮಹಿಮೆಯಿಂದ ಎಲ್ಲೆಲ್ಲೂ ಮನ್ನಣೆ, ಮಾನ್ಯತೆ, ಗೌರವಗಳು ಸಿಗುತ್ತವೆ. ಆದರೆ ಈ ದುಗ್ಗಾಣಿ ಎನ್ನುವಂತಹದು 'ದುರ್ಜನ' ಸಂಗದಂತೆ ಬಲುಕೆಟ್ಟದ್ದು ಎಂದಿದ್ದಾರೆ. ಏಕೆಂದರೆ ಹಣ ಸ್ಥಿರವಾಗಿ ಒಬ್ಬರ ಬಳಿ ನಿಲ್ಲುವುದಿಲ್ಲ. ಹಾಗೂ ಒಬ್ಬರಿಗಿಂತ ಮತ್ತೊಬ್ಬರು ಹಣವನ್ನು ಅರ್ಜಿಸುವ ಬಲಾಢ್ಯರು ಇರುವುದರಿಂದ ಕೆಟ್ಟಜನರ ಸಹವಾಸದಂತೆ ಕೂಡಿಸುವ ಚಟ ಬೆಳೆಯುತ್ತಾ ಹೋಗುತ್ತದೆ. ಧನವನ್ನು ಅರ್ಜಿಸುವ ಆಸೆ ದುರಾಸೆಯಾಗಿ ಬಲಿಯುತ್ತಾ, ಬೆಳೆಯುತ್ತಾ ಹೋದಂತೆ ಮನುಷ್ಯತ್ವವನ್ನು ಬಿಟ್ಟು, ಅನ್ಯಾಯದ ಹಾದಿಗಳಲ್ಲಿ ಸಂಗ್ರಹಿಸುವ, ಸಂಪಾದಿಸುವ ಗುಣ ಹೆಚ್ಚುತ್ತದೆ. ಅದಕ್ಕಾಗಿ ದುಷ್ಟಜನರ ಸಹವಾಸದಂತೆ ಮನುಷ್ಯನನ್ನು ಹಾಳು ಮಾಡುತ್ತದೆಂದು ಹೇಳಿದ್ದಾರೆ. ಒಳ್ಳೆಯದು, ಕೆಟ್ಟದ್ದು, ಮಾನ, ಅಪಮಾನ, ಆಚಾರ, ಅನಾಚಾರ, ಸಂಬಂಧಗಳ ಬೆಳವಣಿಗೆ ಮತ್ತು ನಾಶ ಎಲ್ಲವುಗಳಿಗೆ ದುಗ್ಗಾಣಿ ಕಾರಣ. ಹಣವಿದ್ದ ಮನುಷ್ಯ ದೇವರನ್ನು ನೆನೆಯುವುದಿಲ್ಲ. ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ದೇವರ ನೆನಪು, ಧ್ಯಾನವನ್ನು ಸಹ ಮಾಡಲು ಹಣವೇ ಕಾರಣ ಎಂದು ಹೇಳಿದ್ದಾರೆ. ಹಣವನ್ನು ಕುರಿತ ಪುರಂದರದಾಸರ ಚಿಂತನೆ ಎಲ್ಲಾ ಕಾಲಕ್ಕೂ ಪ್ರಸ್ತುತವಾಗಿರುವುದು.

ಸಮಾಜದಲ್ಲಿನ ಕೆಟ್ಟ ಜನರ ಸಹವಾಸ 'ಜಾಲಿಯ ಮರದಂತೆ ಧರೆಯೊಳು ದುರ್ಜನರು ಮೂಲಾಗ್ರ ಪರಿಯಂತ ಮುಳ್ಳು ಕೂಡಿಪ್ಪಂತೆ' ನಿಷ್ಪ್ರಯೋಜಕರು ಎಂದಿದ್ದಾರೆ. ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳು, ಹಸಿದು ಬಂದವರಿಗೆ ಹಣ್ಣು, ಕುಸುಮ ವಾಸನೆಗಳಿಲ್ಲದ ರಸದ ಆಸ್ವಾದನೆಯಲ್ಲಿ ವಿಷ ಬೆರೆತಂತೆ ದುರ್ಜನರು. ಊರ ಹಂದಿಗೆ ಷಡ್ರಸಾನ್ನವನ್ನಿಟ್ಟರೂ

ಹೇಸಿಗೆಯನ್ನು ಬಿಡದಂತೆ, ಘೋರಪಾಪಿಗೆ ತತ್ವಜ್ಞಾನವನ್ನು ಹೇಳಿದರೂ ಕ್ರೂರ ಕರ್ಮಗಳನ್ನು ಬಿಟ್ಟು ಸಜ್ಜನನಾಗದ ಪರಿಯ ಇಲ್ಲಿ ಅಭಿವ್ಯಕ್ತವಾಗಿದೆ. ಹಾಗಾಗಿ ಸಜ್ಜನರು, ಅವರಿಂದ ಕೂಡಿದ ಸಮಾಜ ಏಳಿಗೆಯಾಗುತ್ತದೆ. ದುರ್ಜರಿಂದ ಸಮಾಜ ಅಧಃಪತನದತ್ತ ಸಾಗುತ್ತದೆಂದು ತಿಳಿಸಿದ್ದಾರೆ.

ತಮ್ಮ ಕೀರ್ತನೆಯಲ್ಲಿ 'ಕೆಟ್ಟು ನೆಂಟರ ಸೇರುವುದು ಬಹಳ ಕಷ್ಟ. ಹುಟ್ಟೇಳು ಜನ್ಮಕ್ಕೆ ಬರಬೇಡ ಹರಿಯೆ' ಎಂದು ಹುಟ್ಟೇಳು ಜನ್ಮಕ್ಕೂ ಬರಬೇಡವೆಂದು ಹೇಳಿದ್ದಾರೆ. ವಿಷವನ್ನು ಕುಡಿಯಬಹುದು, ಇರಿದು ಕೊಳ್ಳಬಹುದು, ಹರಿತವಾದ ಶೂಲಕ್ಕೆ ಬಿದ್ದು ಸಾಯಬಹುದು, ಬೆಂಕಿಗೆ ಬೀಳಬಹುದು, ಧರೆಗೆ ಧುಮುಕಬಹುದು, ಉಗ್ರ ಮಾರಿಗೆ ಆಹಾರವಾಗಬಹುದು, ಸುರಿವ ಕೆಂಡದ ಮಳೆಗೆ ಬರಿ ಮೈಯನ್ನು ಒಡ್ಡಬಹುದು, ಆಯುಧದ ಮೊನೆಗೆ ಗುರಿಯಾಗಬಹುದು ಆದರೆ ಕೆಟ್ಟು ನೆಂಟರನ್ನು ಮಾತ್ರ ಸೇರಬಾರದೆಂದು ಸಂಸಾರಿಯಾಗಿ ಸಂಬಂಧಿಕರೊಂದಿಗೆ ಆದ ಅನುಭವಜನ್ಯ ಜ್ಞಾನವನ್ನು ಲೋಕಕ್ಕೆ ತಿಳಿಹೇಳಿದ್ದಾರೆ.

'ಏನು ಇಲ್ಲವೊ ಎರಡು ದಿನದ ಸಂಸಾರ ದಾನ ಧರ್ಮವ ಮಾಡು ಇದನರಿತು ಮನುಜ' ಎಂಬ ಕೀರ್ತನೆಯಲ್ಲಿ ಸಮಾಜದಲ್ಲಿ ಮಾನುಷ್ಯನಾಗಿ ಹೇಗೆ ಬದುಕಬೇಕೆಂದು ಹೇಳಿದ್ದಾರೆ. ಹಸಿದು ಬಂದವರಿಗೆ ಆಹಾರವನ್ನು ನೀಡಬೇಕು, ಯೋಗ್ಯವಾದ ಭೂಮಿಯನ್ನು ದಾನ ಕೊಡಬೇಕು, ಕಳ್ಳತನ, ಸುಳ್ಳತನ ಇರಬಾರದು. ಒಳ್ಳೆಯವರನ್ನು ನಿಂದಿಸಬಾರದು, ತಾನು ಒಳ್ಳೆಯವನೆಂದು ಹಿಗ್ಗದೆ, ದೊರೆತನ ಬಂದಾಗ ಕೆಟ್ಟದ್ದನ್ನು ಮಾಡದೆ, ಸಂಪತ್ತು ಬಂದ ಕಾಲಕ್ಕೆ ಹಿಗ್ಗದೆ ಬದುಕನ್ನು ಸಾಗಿಸಬೇಕು. ಇದರಿಂದ ವ್ಯಕ್ತಿ ಮತ್ತು ಸಮಾಜಕ್ಕೆ ಉಳಿತಾಗುತ್ತದೆಂದು ಪುರಂದರದಾಸರು ಸಾರಿದ್ದಾರೆ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಕೀರ್ತನೆಯಲ್ಲಿ ಲೋಕದ ಜನ ಬದುಕಲು ನಾನಾ ವಿಧವಾದ ಕಸುಬುಗಳನ್ನು ಕೈಗೊಳ್ಳುತ್ತಾರೆ. ಇವುಗಳೆಲ್ಲವು ಹೊಟ್ಟೆ ಮತ್ತು ಗೇಣು ಬಟ್ಟೆಗಳ ಸಂಪಾದನೆಯೇ ಆಗಿದೆ. ಇದರಲ್ಲಿ ಯಾವುದು ಮೇಲು-ಕೀಳುಗಳಿಲ್ಲ. ಭಾರತೀಯ ವರ್ಣಾಶ್ರಮಧರ್ಮ ಪರಂಪರೆಯಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಹಾಗೂ ಇವುಗಳ ಜಾತಿ- ಉಪಜಾತಿಗಳ ಕಸುಬು, ಕುಲಕಸುಬು, ಉಪಕಸುಬುಗಳೆಲ್ಲವು ಸಹ ಹೊಟ್ಟೆಪಾಡಿಗಾಗಿ ಎಂದು ಹೇಳಿದ್ದಾರೆ. ಜನ ಸಾಮಾನ್ಯರ ಭಾಷೆಯನ್ನು ಕೀರ್ತನೆಗಳಲ್ಲಿ ಬಳಸಿದರು. ಗಾಯನ, ನರ್ತನಗಳ ಮೂಲಕ ತಮ್ಮ ಸಂದೇಶಗಳನ್ನು ಜನತೆಗೆ ತಲುಪಿಸಿದವರು. ಸಮಾಜದಲ್ಲಿನ ಮೂಢನಂಬಿಕೆ, ಲೋಪ, ದೋಷಗಳನ್ನು ಟೀಕಿಸಿದರು. ಅಸಾಮಾನ್ಯವಾದ ನೈತಿಕ ಧೈರ್ಯವನ್ನು ಮತ್ತು ಸಾಂಸ್ಕೃತಿಪ್ರಜ್ಞೆಯನ್ನು ಅಭಿವ್ಯಕ್ತಿಸಿದರು.

'ಆಚಾರವಿಲ್ಲದ ನಾಲಿಗೆ ನಿನ್ನ ನೀಚ ಬುದ್ಧಿಯ ಬಿಡು ನಾಲಿಗೆ' ಎಂಬ ಕೀರ್ತನೆಯಲ್ಲಿ ಆಚಾರವಿಲ್ಲದೆ ಪರರ ದೂಷಣೆಗೆ ಚಾಚಿಕೊಂಡಿರುವ ನಾಲಿಗೆ ಒಳ್ಳೆಯದನ್ನು ಮಾತನಾಡಬೇಕು ಮತ್ತು ದೇವರನ್ನು ಸ್ಮರಿಸುತ್ತಿರಬೇಕೆಂದು ತಿಳಿಹೇಳಿದ್ದಾರೆ. ಮನುಷ್ಯರೊಂದಿಗೆ ನಮ್ಮ ಮಾತು ಸೌಜನ್ಯ, ಸಭ್ಯತೆಯಿಂದಿರಬೇಕು ಎಂದು ಸಾರಿದರು. ಮಾತು, ಭಾಷೆ, ಸಂವಹನದ ಬಗ್ಗೆ ಸಮಾಜವನ್ನು ಎಚ್ಚರಿಸಿದರು. ಪುರಂದರ ದಾಸರು ಅನುಭವಗಳು, ಅನುಭಾವಿಗಳು ಆಗಿದ್ದವರು. ಜಾಣ್ಮೆ ಮತ್ತು ಧೈರ್ಯದಿಂದ ದಾಸಕೂಟಕ್ಕೆ ಕಾರಣರಾದವರು. ಆಗಿನ ಕಷ್ಟದ ಸಂದರ್ಭದಲ್ಲಿ ಪರಿಸ್ಥಿತಿಯನ್ನು ದಿಟ್ಟತನದಿಂದ ಎದುರಿಸಿ ನಿಂತವರು. ಇಂದು ಸಹ ಸಾಮಾನ್ಯ ಜನ ಹೇಗೆ ಕಷ್ಟದ ಪರಿಸ್ಥಿತಿಯನ್ನು ಎದುರಿಸಬಹುದು ಎಂಬುದನ್ನು ತೋರಿಸಿಕೊಟ್ಟವರು. ಅಂದಿನ ಪುರಂದರದಾಸರ ನಿಲುವು ಇಂದು ನಮಗೆ ಮಾರ್ಗದರ್ಶನವಾಗಬಲ್ಲದು.

'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಜಗಳವೇ ಲೇಸು' ಎಂಬ ಕೀರ್ತನೆಯಲ್ಲಿ ಮನುಷ್ಯ ಸಂಘ ಜೀವಿಯಾದರಿಂದ ಉತ್ತಮ ಜ್ಞಾನಿಗಳ ಜೊತೆಗೆ ಸಂಬಂಧವನ್ನು ಬೆಳೆಸುವುದು ಒಳ್ಳೆಯದೆಂದು ಹೇಳಿದ್ದಾರೆ. ಮನುಷ್ಯ ನೆಮ್ಮದಿಯ ಪ್ರಪಂಚ, ರಾಷ್ಟ್ರ, ರಾಜ್ಯ ಹಾಗೂ ತನ್ನ ಸುತ್ತಮುತ್ತಲ ಪರಿಸರವನ್ನು ಅರಿತು ಬದುಕಲು ಜ್ಞಾನಕ್ಕಿಂತ

ಸುಜ್ಞಾನ ಅತ್ಯಗತ್ಯ. ಉಳಿದೆಲ್ಲವು ವ್ಯರ್ಥ. ಉತ್ತಮವಾದ ಜ್ಞಾನದ ಬಲದಿಂದ ಜೀವನವಿಡಿ ನೆಮ್ಮದಿಯ ಬದುಕನ್ನು ನೆಡೆಸಲು ಸಾಧ್ಯವೆಂದು ತಿಳಿಹೇಳಿದವರು ಪುರಂದರ ದಾಸರು. ಅಜ್ಞಾನ ಮತ್ತು ಸುಜ್ಞಾನಗಳ ಬಗ್ಗೆ ಸ್ಪಷ್ಟ ತಿಳಿವಳಿಕೆಯನ್ನು ಲೋಕಕ್ಕೆ ತಿಳಿಸಿದ್ದಾರೆ. ಕಾಲ, ದೇಶ, ಭಾಷೆಗಳ ಎಲ್ಲೆಗಳನ್ನು ದಾಟಿ ಬದುಕಲು ಸಾಧ್ಯವಾಗಬಲ್ಲ 'ಸಾಧನ' ಸುಜ್ಞಾನ. ಅದಕ್ಕಾಗಿ ಹಣ, ಅಧಿಕಾರ, ಅಂತಸ್ತು ಮುಂತಾದವುಗಳ ಬಲಕ್ಕಿಂತ ಲೋಕದಲ್ಲಿ ಮನುಷ್ಯನಾಗಿ ಬದುಕಲು ಮುಖ್ಯವಾದುದು ಜ್ಞಾನವೆಂಬುದನ್ನು ತೋರಿಸಿಕೊಟ್ಟವರು ಪುರಂದರದಾಸರು.

'ಧರ್ಮಕ್ಕೆ ಕೈ ಬಾರದೀ ಕಾಲ ಪಾಪ', 'ಜಗದೊಳಿರುವ ಮನುಜರೆಲ್ಲ ಹಗರಣ ಮಾಡುವುದನೆ ಕಂಡು', 'ಸತ್ಯವಂತರಿಗಿದು ಕಾಲವಲ್ಲ, ಎಂಬ ಕೀರ್ತನೆಗಳಲ್ಲಿ ಅಂದಿನ ಭ್ರಷ್ಟವಾಗುತ್ತಿರುವ ನಡವಳಿಕೆಯನ್ನು ಕಂಡು ಹೀಗೆ ಹೇಳಿದ್ದಾರೆ. ಸಜ್ಜನರು, ದಾನ, ಧರ್ಮ, ನ್ಯಾಯ, ಸತ್ಯ ಮೊದಲಾದವುಗಳ ಆಚರಣೆಗೆ ಮತ್ತು ತಾಯಿತನಕ್ಕೆ ಬೆಲೆಯಿಲ್ಲದ ಕಾಲವಿದು ಎಂದು ಅಂದೇ ಪುರಂದರದಾಸರು ತಮ್ಮ ಕೀರ್ತನೆಗಳಲ್ಲಿ ವ್ಯಕ್ತಪಡಿಸಿದ್ದಾರೆ. ಆದರೆ ಅದು ಮತ್ತಷ್ಟು ಹದಗೆಟ್ಟಿರುವುದು ಇಂದು ಕಂಡುಬರುತ್ತಿದೆ.

ಸಾಹಿತ್ಯದ ಒಂದು ಪ್ರಕಾರವಾಗಿ ಮಾತ್ರ ಕೀರ್ತನೆಗಳನ್ನು ನೋಡದೆ ವರ್ತಮಾನಕಾಲದ ಸಾಮಾಜಿಕ ಸನ್ನಿವೇಶದಲ್ಲಿ ವಿವೇಚಿಸಲು ಯೋಗ್ಯವಾಗಿದೆ. ಕೀರ್ತನೆಯ ಸಾಹಿತ್ಯ ಪ್ರಕಾರ ಕೇವಲ ಒಂದು ಜಾತಿ, ಧರ್ಮದ ಮೌಲ್ಯಗಳ ಸಂವಹನಕ್ಕಾಗಿ ನಿರ್ಮಿತವಾದುದಲ್ಲ. ಜಾಗತೀಕರಣದ, ವಾಣಿಜ್ಯೀಕರಣ ಮತ್ತು ಆಧುನಿಕರಣಗಳ ದಾಳಿಯಲ್ಲಿ ದೇಸೀಯ ಸಂಸ್ಕೃತಿಯ ಲಕ್ಷಣಗಳನ್ನು ರಕ್ಷಿಸಿಕೊಳ್ಳಲು ಬಳಸಬಹುದಾದ ಸಾಧನವಾಗಿವೆ.

ಒಟ್ಟಾರೆಯಾಗಿ ಪುರಂದದಾಸರ ಆಶಯಗಳು ವ್ಯಕ್ತಿನಿಷ್ಟವಾಗಿವೆ. ಆದರೂ ಸಾಂಸ್ಕೃತಿಕ ಬದುಕಿಗೆ ಅನ್ವಯವಾಗಿವೆ. ವ್ಯಕ್ತಿ ಸುಧಾರಿಸಿದರೆ ಸಮಾಜ, ಸಮುದಾಯ ತಮ್ಮಷ್ಟಕ್ಕೆ ತಾವೆ ಸುಧಾರಿಸಿಕೊಳ್ಳುತ್ತವೆ ಎಂಬುದು ಪುರಂದರದಾಸರ ಆಶಯವಾಗಿದೆ.

## ಪರಾಮರ್ಶನ ಗ್ರಂಥಗಳು


1. ವಿವಿಧ ಲೇಖಕರು, ಕನ್ನಡ ತತ್ವಪದಕಾರರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು
2. ಸಂ.ಬಸವರಾಜ ಕಲ್ಗುಡಿ, ಸುವರ್ಣ ವಿಚಾರ ಸಾಹಿತ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
3. ಸಂ.ಸಿದ್ಧನ ಗೌಡ ಪಾಟೀಲ, ಹೊಸತು (ಮಾಸ ಪತ್ರಿಕೆ), ನವಕರ್ನಾಟಕ ಪ್ರಕಾಶನ, ಬೆಂಗಳೂರು
4. ಸಂ. ಪ್ರೊ.ಎ.ವಿ.ನಾವಡ, ಡಾ.ಗಾಯತ್ರಿ ನಾವಡ, ಸಾವಿರಾರು ಕೀರ್ತನೆಗಳು, ಅಂಕಿತ ಪುಸ್ತಕ ಪ್ರಕಾಶನ, ಬಸವನ ಗುಡಿ ಬೆಂಗಳೂರು, 2002
5. ಸಾ.ಕೃ.ರಾಮಚಂದ್ರರಾವ್, ದಾಸ ಸಾಹಿತ್ಯ ಮತ್ತು ಸಂಸ್ಕೃತಿ, ಕನ್ನಡ ಪುಸ್ತಕ ಪ್ರಾಧಿಕಾರ, ಚಾಮರಾಜ ಪೇಟೆ, ಬೆಂಗಳೂರು, 2003
6. ಡಾ.ಎಚ್.ಎಸ್.ವೆಂಕಟೇಶ ಮೂರ್ತಿ, ಕೀರ್ತನೆಕಾರರು, ಸಂಪುಟ-8, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ಮರು ಮುದ್ರಣ 2000